


ಹಿಮಾ ದಾಸ್

ಸಾಕ್ಷಿ

ಅನೀಶ್ ಭಾನ್



ಸೈನಾ

ಏಷ್ಯನ್ ಗೇಮ್ಸ್ 2018

# ಕನಸುಗಳ ಬೆನ್ನು ಹತ್ತಿ..



ಸಿಂಧು

■ ಗಿರೀಶ ದೊಡ್ಡಮನಿ

ವಿಶ್ವದ ಕ್ರೀಡಾ ಭೂಪಟದಲ್ಲಿ ಏಷ್ಯಾ ಖಂಡದ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗಲು ಇಂಡೋನೆಷ್ಯಾದ ಜಕಾರ್ತ ನಗರ ಸಿದ್ಧವಾಗಿದೆ. ಭಾರತದ ಕ್ರೀಡಾಂಗಣದಲ್ಲಿಯೂ ಸಂಚಲನ ಮೂಡಿದೆ. ಪದಕಗಳ ಬೇಟೆಯಾಡುವ ಉತ್ಸಾಹದಲ್ಲಿ ಕ್ರೀಡಾಪಟುಗಳ ದಂಡು ಸಿದ್ಧವಾಗಿದೆ. ಆಗಸ್ಟ್ 18 ರಿಂದ ಸೆಪ್ಟೆಂಬರ್ 2ರವರೆಗೆ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಭಾರತದ 572 ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. 36 ಕ್ರೀಡೆಗಳಲ್ಲಿ ಭಾರತವು ಸ್ಪರ್ಧಿಸುತ್ತಿದೆ. 260 ಮಹಿಳಾ ಸ್ಪರ್ಧಿಗಳು ಇದ್ದಾರೆ.

2014ರ ಏಷ್ಯನ್ ಕ್ರೀಡಾಕೂಟದಲ್ಲಿ ಎಂಟನೇ ಸ್ಥಾನ ಗಳಿಸಿದ್ದ ಭಾರತ ಈ ಬಾರಿ ಅಗ್ರ ಮೂರರಲ್ಲಿ ಸ್ಥಾನ ಪಡೆಯುವ ಆತ್ಮವಿಶ್ವಾಸದಲ್ಲಿದೆ.

ಜೂನಿಯರ್ ಅಥ್ಲೆಟಿಕ್ಸ್‌ನ ಜಾವೆಲಿನ್ ಥ್ರೋನಲ್ಲಿ ಪದಕದ ಸಾಧನೆ ಮಾಡಿದ್ದ ಮೊದಲ ಅಥ್ಲೀಟ್ ನೀರಜ್ ಚೋಪ್ರಾ, 2016ರ ರಿಯೊ ಒಲಿಂಪಿಕ್ಸ್‌ನ ಮಹಿಳೆಯರ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಪಿ.ವಿ. ಸಿಂಧು, ಮಹಿಳೆಯರ ಕುಸ್ತಿಯಲ್ಲಿ ಕಂಚು ಗೆದ್ದಿದ್ದ ಸಾಕ್ಷಿ ಮಲಿಕ್, ಈಚೆಗೆ ಗೋಲ್ಡ್ ಕೋಸ್ಟ್‌ನಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಮೊದಲ ಬಾರಿ ಟೇಬಲ್ ಟೆನಿಸ್ ಪದಕ ಗೆದ್ದಿದ್ದ ಮಣಿಕಾ ಬಾತ್ರಾ, ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಕನ್ನಡಿಗ ಗುರುರಾಜ್ ಪೂಜಾರಿ, ತೀರಾ ಇತ್ತೀಚೆಗಷ್ಟೇ ತಾಂಪೇರ್‌ನಲ್ಲಿ ನಡೆದಿದ್ದ ಜೂನಿಯರ್ ಅಥ್ಲೆಟಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದು ದಾಖಲೆ ಬರೆದಿದ್ದ ಹಿಮಾ ದಾಸ್ ಅವರು ಇರುವ ತಂಡದಿಂದ ಬೊಗಸೆ ತುಂಬ ಪದಕಗಳ ನಿರೀಕ್ಷೆ ಮಾಡುವುದರಲ್ಲಿ ತಪ್ಪೇನೂ ಇಲ್ಲ.

ವಿನ್ಯಾಸ: ದಿಲ್